**ಕರ್ನಾಟಕ ಸರ್ಕಾರ**

**ಆಯುಕ್ತರು, ಭೂಸ್ವಾಧೀನ, ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ, ಕೃಮೇಯೋ, ಹಾಗೂ ಪದನಿಮಿತ್ತ ಸರಕಾರದ ಕಾರ್ಯದರ್ಶಿಗಳು, ಕರ್ನಾಟಕ ಸರಕಾರ, ಕಂದಾಯ ಇಲಾಖೆ, ನವನಗರ, ಬಾಗಲಕೋಟ ಇವರ ಕಛೇರಿ – 587 103.**

ದೂರವಾಣಿ :08354-235062 Email : gmlaqukp@gmail.com

ಸಂ:ಕಂಇ/ಭೂಸ್ವಾ-05/ಸಿಆರ್-06/2016-17/885 ದಿನಾಂಕ: 17-10-2019.

ಇವರಿಗೆ,
ಹೆಚ್ಚುವರಿ ವಿಶೇಷ ಭೂಸ್ವಾಧೀನಾದಿಕಾರಿ,
ಕೃ.ಮೇ.ಯೋ. ಬೀಳಗಿ.

ಮಾನ್ಯರೇ,

ವಿಷಯ:- ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ 519.60 ಮೀಟರ್ ದಿಂದ 524.256 ಮೀಟರ್‌ವರೆಗೆ ಮುಳುಗಡೆಯಾಗಲಿರುವ ಬೀಳಗಿ ತಾಲೂಕಿನ **ಬಾವಲತ್ತಿ** ಗ್ರಾಮದ ಕಟ್ಟಡ/ಆಸ್ತಿಗಳ ಭೂಸ್ವಾಧೀನ ಕುರಿತು ಭೂಸ್ವಾದೀನ ಕಾಯ್ದೆ 2013ರ ಕಲಂ 23ರ ಅಡಿಯಲ್ಲಿ ಐತೀರ್ಪು ರಚಿಸಲು ಕಲಂ 25ರಡಿ ಕಾಲಾವಕಾಶ ನೀಡುವ ಕುರಿತು.

ಉಲ್ಲೇಖ:- ತಮ್ಮ ಕಛೇರಿ ಪತ್ರ ಸಂ:ಎಲ್‌ಎಕ್ಯೂ/ಎಸ್‌ಆರ್-14/2014-15/05, ದಿ:04-06-2019.

-00000-

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಆಲಮಟ್ಟಿ ಜಲಾಶಯದ ಹಿನ್ನೀರಿನ ಮಟ್ಟ 519.60 ಮೀಟರ್ ದಿಂದ 524.256 ಮೀಟರ್‌ವರೆಗೆ ಮುಳುಗಡೆಯಾಗಲಿರುವ ಬೀಳಗಿ ತಾಲೂಕಿನ **ಬಾವಲತ್ತಿ** ಗ್ರಾಮದ ಕಟ್ಟಡ/ಆಸ್ತಿಗಳ ಭೂಸ್ವಾಧೀನ ಕುರಿತು ಭೂಸ್ವಾದೀನ ಕಾಯ್ದೆ ಕಲಂ 19(1) ಅಧಿಸೂಚನೆಯು ರಾಜ್ಯ ಪತ್ರದಲ್ಲಿ ದಿನಾಂಕ: 11-06-2018 ರಂದು ಪ್ರಕಟವಾಗಿದ್ದು, ತಾಂತ್ರಿಕ ಇಲಾಖೆಯವರಿಂದ ಕಟ್ಟಡಗಳ ಅಂದಾಜು ಮೌಲ್ಯ ಮಾಪನಗಳು ಸ್ವೀಕೃತಗೊಂಡ ನಂತರ ನಿಯಮಾನುಸಾರ ಸ್ಥಳ ತನಿಖೆ ಮಾಡಿ ಐತೀರ್ಪು ರಚಿಸಲು ಸಾಕಷ್ಟು ಕಾಲಾವಕಾಶ ಬೇಕಾಗುವುದರಿಂದ, ಭೂಸ್ವಾಧೀನ ಕಾಯ್ದೆ ಕಲಂ 25ರಡಿ ಅವಧಿ ವಿಸ್ತರಿಸುವ ಅವಶ್ಯಕತೆ ಇರುವುದರಿಂದ ಸದರಿ ಅವಧಿಯನ್ನು ಮುಂದುವರೆಸಬೇಕೆಂದು ವಿನಂತಿಸಿದ್ದು ಇರುತ್ತದೆ.

ಉಲ್ಲೇಖಿತ ಪತ್ರದಲ್ಲಿ ಕೋರಿರುವಂತೆ ಬೀಳಗಿ ತಾಲೂಕಿನ **ಬಾವಲತ್ತಿ** ಗ್ರಾಮದ ಕಟ್ಟಡ/ಆಸ್ತಿಗಳ ಭೂಸ್ವಾಧೀನ ಕುರಿತು ಭೂಸ್ವಾದೀನ ಕಾಯ್ದೆ ಕಲಂ 19(1) ಅಧಿಸೂಚನೆಯು ರಾಜ್ಯ ಪತ್ರದಲ್ಲಿ ದಿನಾಂಕ: 11-06-2018 ರಂದು ಪ್ರಕಟವಾಗಿರುತ್ತದೆ. ಸದರಿ ಪ್ರಕರಣದಲ್ಲಿ ತಾಂತ್ರಿಕ ಇಲಾಖೆಯವರಿಂದ ಕಟ್ಟಡಗಳ ಅಂದಾಜು ಮೌಲ್ಯ ಮಾಪನಗಳು ಬರಬೇಲಾಗಿರುವುದರ ಪ್ರಯುಕ್ತ, ಭೂಸ್ವಾಧೀನ ಕಾಯ್ದೆ ಕಲಂ 23ರಡಿ ಐತೀರ್ಪು ಅನುಮೋದನೆ ಪಡೆದುಕೊಳ್ಳಲು ಭೂಸ್ವಾಧೀನ ಕಾಯ್ದೆ ಕಲಂ 25ರಡಿ ದಿನಾಂಕ: 11-06-2019 ರಿಂದ 10-06-2020ರ ವರೆಗೆ ಕಾಲಾವಕಾಶ ನೀಡಿದೆ. ಈ ಪತ್ರವನ್ನು ಅಂತರ್ಜಾಲದಲ್ಲಿ ಪ್ರಕಟಿಸಲು ತಿಳಿಸಿದೆ.

ತಮ್ಮ ವಿಶ್ವಾಸಿ,

ಕ.ಟಿ.ಮಾನ್ಯ ಆಯುಕ್ತರವರಿಂದ
ಅನುಮೋದಿಸಲ್ಪಟ್ಟಿದೆ.

ಆಯುಕ್ತರು, 17/10/19
ಪುಪು ಮತ್ತು ಭೂಸ್ವಾಧೀನ, ಕೃಮೇಯೋ,
ನವನಗರ, ಬಾಗಲಕೋಟ
ಇವರ ಪರವಾಗಿ.

ಪ್ರತಿ: ಸಿಸ್ಟಮ್ ಮ್ಯಾನೇಜರ್, ಮಹಾ ವ್ಯವಸ್ಥಾಪಕರವರ ಕಛೇರಿ, ಪು & ಪು, ಕೃ.ಮೇ.ಯೋ., ಬಾಗಲಕೋಟ ಇವರಿಗೆ.